**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ 15

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ          ದಿನಾಂಕ : DATE: 7/11/20

# ಶಾಲೆ ಆರಂಭಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳ ಹಿಂದೇಟು

## ಕೋವಿಡ್ ಹೊಣೆ ಸರ್ಕಾರ ವಹಿಸಿಕೊಂಡರೆ 9-12 ಕ್ಲಾಸ್ ಶುರು

## ಇಲ್ಲವಾದರೆ ಕೊರೋನಾ ಮುಗಿಯುವವರೆಗೆ ಶಾಲಾರಂಭ ಬೇಡ

## ಶಿಕ್ಷಣ ಇಲಾಖೆ ಆಯುಕ್ತರ ಸಭೆಯಲ್ಲಿ ಖಾಸಗಿ ಶಾಲೆಗಳ ಪಟ್ಟು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಎಲ್ಲ ಜವಾಬ್ದಾರಿಗಳನ್ನು ಸರ್ಕಾರವೇ ವಹಿಸಿಕೊಂಡರೆ ಮಾತ್ರ ಮೊದಲು 9ರಿಂದ 12ನೇ ತರಗತಿ ಆರಂಭಿಸಬಹುದು. ಎಲ್ಲ ಹೊಣೆಯನ್ನೂ ಶಿಕ್ಷಣ ಸಂಸ್ಥೆಗಳಿಗೇ ಹೊರಿಸುವುದಾದರೆ ಕೋವಿಡ್ ಸಂಪೂರ್ಣ ಕಡಿಮೆಯಾಗುವವರೆಗೂ ನಾವು ಶಾಲೆ ತೆರೆಯಲು ಸಿದ್ಧರಿಲ್ಲ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿವೆ.

ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆಗೆ ಶಾಲೆ ಪುನಾರಂಭಿಸುವ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಅನ್ಬುಕುಮಾರ್ ಅವರು ನಗರದ ಇಲಾಖೆಯ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದರು. ಸಭೆಯಲ್ಲಿ ಖಾಸಗಿ ಶಿಕ್ಷಣಸಂಸ್ಥೆಗಳಪ್ರತಿನಿಧಿಗಳು, ಥರ್ಮಲ್ ಸ್ಕ್ಯಾನರ್, ಸ್ಯಾನಿಟೈಸರ್ ಇಟ್ಟುಕೊಂಡು ಶಾಲೆ ಆರಂಭಿಸಿ ಎಂದರೆ ನಮ್ಮಿಂದ ಆಗಲ್ಲ. ಮಕ್ಕಳು, ಶಿಕ್ಷಕರು, ಸಿಬ್ಬಂದಿಗೆ ಉಚಿತ ಕೋವಿಡ್ ಪರೀಕ್ಷೆ, ಎಲ್ಲ ಸಿಬ್ಬಂದಿಗೂ ಉಚಿತ ಆರೋಗ್ಯ ವಿಮೆ, ಯಾರಿಗಾದರೂ ಸೋಂಕು ತಗಲಿದರೆ ಸಂಪೂರ್ಣ ಚಿಕಿತ್ಸಾ ವೆಚ್ಚ ಸರ್ಕಾರವೇ ಭರಿಸಬೇಕು. ಮಕ್ಕಳನ್ನು ಶಾಲೆಗೆ ಕಳಿಸಲು ಪೋಷಕರು ಲಿಖಿತ ಒಪ್ಪಿಗೆ ನೀಡಬೇಕು. ಈ ಎಲ್ಲಾ ಜವಾಬ್ದಾರಿಗಳನ್ನೂ ಸರ್ಕಾರ ವಹಿಸಿಕೊಂಡು ಸೂಕ್ತ ಮಾರ್ಗಸೂಚಿ ಪ್ರಕಟಿಸಬೇಕು ಎಂದು ಸ್ಪಷ್ಟವಾಗಿ ಹೇಳಿದರು.

ಮಕ್ಕಳ ವಿಚಾರದಲ್ಲಿ ಪೋಷಕರು ಹೆಚ್ಚು ಭಾವನಾತ್ಮಕವಾಗಿರುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಆದರೂ ಶಾಲೆಗಳಿಗೂ ಸಮಸ್ಯೆ, ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತೆ. ಈ ಎಲ್ಲ ಜವಾಬ್ದಾರಿಗಳನ್ನೂ ಸರ್ಕಾರ ತೆಗೆದುಕೊಳ್ಳುವುದಾದರೂ ಮೊದಲು 9ರಿಂದ 12ನೇ ತರಗತಿವರೆಗಿನ ಮಕ್ಕಳಿಗೆ ಮಾತ್ರ ಶಾಲೆ ತೆರೆಯಬೇಕು. ಉಳಿದ ತರಗತಿ ಮಕ್ಕಳಂತೂ ಸದ್ಯಕ್ಕೆ ಶಾಲೆಗೆ ಬರುವುದು ಬೇಡ.

▸ 14

### ಖಾಸಗಿ ಶಾಲೆಗಳ ಬೇಡಿಕೆ ಏನು?

- ಸರ್ಕಾರ ಸಂಪೂರ್ಣ ಜವಾಬ್ದಾರಿ ಹೊರುವುದಾದರೆ ಶಾಲೆ ಆರಂಭಿಸಲು ಸಿದ್ಧ
- ಥರ್ಮಲ್ ಸ್ಕ್ಯಾನರ್, ಸ್ಯಾನಿಟೈಸರ್ ಇಟ್ಟು ಶಾಲೆ ನಡೆಸಿ ಎಂದರೆ ಆಗೋದಿಲ್ಲ
- ಬೇಡಿಕೆಗೆ ಒಪ್ಪಿದರೆ ಮೊದಲು 9ರಿಂದ 12ನೇ ತರಗತಿವರೆಗೆ ಆರಂಭಿಸಲು ಸಿದ್ಧ
- ತರಗತಿಗೆ ಬರುವ ಮಕ್ಕಳ ಪೋಷಕರು ಈ ಬಗ್ಗೆ ಲಿಖಿತವಾಗಿ ಒಪ್ಪಿಗೆ ನೀಡಬೇಕು
- ಪಾಳಿ, ದಿನಬಿಟ್ಟು ದಿನ ತರಗತಿಗೆ ಸರ್ಕಾರ ಸಮಗ್ರ ಮಾರ್ಗಸೂಚಿ ರೂಪಿಸಬೇಕು
- ಉಳಿದ ತರಗತಿಗೆ ಆನ್‌ಲೈನ್ ತರಗತಿ ಮುಂದುವರೆಸಲು ಅವಕಾಶ ನೀಡಬೇಕು
- ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಗೆ ಉಚಿತ ಕೋವಿಡ್ ಪರೀಕ್ಷೆ ನಡೆಸಬೇಕು
- ಶಿಕ್ಷಕ ಹಾಗೂ ಇತರೆ ಸಿಬ್ಬಂದಿಗೆ ಸರ್ಕಾರವೇ ಆರೋಗ್ಯ ವಿಮೆ ಒದಗಿಸಬೇಕು
- ಕೊರೋನಾ ಸೋಂಕು ತಗಲಿದರೆ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಬೇಕು
- ಆರ್ಥಿಕ ಸಂಕಷ್ಟದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಬೇಕು

### ಸರ್ಕಾರಿ ಶಾಲಾ ಸಮಿತಿ ಮಿಶ್ರ ಪ್ರತಿಕ್ರಿಯೆ

ಶಿಕ್ಷಣ ಇಲಾಖೆ ಆಯುಕ್ತ ಅನ್ಬುಕುಮಾರ್ ಅವರು ಶುಕ್ರವಾರ ಎಲ್ಲಾ ತಾಲೂಕು ಮಟ್ಟದ ಎಸ್‌ಡಿಎಂಸಿ (ಶಾಲೆ ಮೇಲುಸ್ತುವಾರಿ ಸಮಿತಿ) ಅಧ್ಯಕ್ಷರು/ ಸದಸ್ಯರೊಂದಿಗೆ



ನಡೆಸಿದ ವಿಡಿಯೋ ಸಂವಾದದಲ್ಲೂ 1ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ಸದ್ಯಕ್ಕಂತೂ ಶಾಲೆ ಆರಂಭಿಸಬಾರದೆಂದು ಒಮ್ಮತದ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ, 9ರಿಂದ 12ನೇ ತರಗತಿ ಮಕ್ಕಳಿಗೆ ಶಾಲೆ ಆರಂಭಿಸುವ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸರ್ಕಾರ ಸಂಪೂರ್ಣ ಸುರಕ್ಷಾ ಕ್ರಮಗಳನ್ನು ಕೈಗೊಂಡು ಮೊದಲ ಹಂತದಲ್ಲಿ 9ರಿಂದ 12ನೇ ತರಗತಿ ವರೆಗಿನ ಮಕ್ಕಳಿಗೆ ಮಾತ್ರ ಶಾಲೆ ತೆರೆಯಬೇಕೆಂದು ಹಲವು ತಾಲೂಕುಗಳ ಎಸ್‌ಡಿಎಂಸಿ ಸದಸ್ಯರು, ಅಧ್ಯಕ್ಷರು ಹೇಳಿದರೆ, ಇನ್ನು ಕೆಲ ತಾಲೂಕುಗಳ ಪ್ರತಿನಿಧಿಗಳು ಶಾಲೆ ಆರಂಭಿಸಿದ ಆಂಧ್ರ ಪ್ರದೇಶದಲ್ಲಿ ಶಿಕ್ಷಕರು ಮತ್ತು ಮಕ್ಕಳಿಗೆ ಸೋಂಕು ತಗಲಿರುವ ಕಾರಣ ಜನವರಿಯಿಂದ ಶಾಲೆ ಆರಂಭಿಸುವ ಬಗ್ಗೆ ಯೋಚನೆ ಮಾಡಬೇಕೆಂದು ಸಲಹೆ ವ್ಯಕ್ತಪಡಿಸಿದ್ದಾರೆ ಎಂದು ಸಂವಾದದಲ್ಲಿ ಭಾಗವಹಿಸಿದ್ದವರು ತಿಳಿಸಿದ್ದಾರೆ.

### ಆಂಧ್ರ, ಉತ್ತರಾಖಂಡ ಶಾಲೆಗಳಲ್ಲಿ ಶಿಕ್ಷಕರು, ಮಕ್ಕಳಿಗೆ ಸೋಂಕು ಏರಿಕೆ

- ಆಂಧ್ರಪ್ರದೇಶ: ನಾಲ್ಕೇ ದಿನದಲ್ಲಿ 829 ಶಿಕ್ಷಕರು, 575 ಮಕ್ಕಳಿಗೆ ಸೋಂಕು
- ಉತ್ತರಾಖಂಡದಲ್ಲೂ 80 ಮಂದಿ ಶಿಕ್ಷಕರಿಗೆ ಸೋಂಕು, ಶಾಲೆ ಬಂದ್

ಅಮರಾವತಿ: ಈಗಾಗಲೇ ಶಾಲೆ ಪುನಾರಂಭಗೊಂಡ ರಾಜ್ಯಗಳ ಬೆಳವಣಿಗೆ ನೋಡಿ ತಮ್ಮ ರಾಜ್ಯಗಳಲ್ಲಿ ಶಾಲಾ-ಕಾಲೇಜು ಪುನಾರಂಭದ ನಿರೀಕ್ಷೆಯಲ್ಲಿರುವ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳನ್ನು ಎಚ್ಚರಿಸುವ ಸುದ್ದಿಗಳು ಆಂಧ್ರ ಮತ್ತು ಉತ್ತರಾಖಂಡದಿಂದ ಬಂದಿದೆ. ನ.2ರಿಂದ ಪ್ರೌಢಶಾಲೆಯ 9 ಮತ್ತು 10ನೇ ತರಗತಿಗಳನ್ನು ಆರಂಭಿಸಿರುವ ಆಂಧ್ರಪ್ರದೇಶದಲ್ಲಿ ದಿನೇದಿನೇ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಕೊರೋನಾ ಸೋಂಕು ಹರಡುತ್ತಿದೆ.

▸ 9